**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕ : 11.08.2026**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದಃ**

1. ದಿಃ 19.09.2024 ರಂದು ಮದ್ಯಾಹ್ನದ ಊಟ ತೆಗೆದುಕೊಂಡು ಗದ್ದೆಗೆ ನಾನು ಒಬ್ಬಳೆ ನಡೆದುಕೊಂಡು ಹೋಗುತ್ತಿದ್ದೆನು. ಅಪಘಾತವಾದಾಗ ಸಮಯ ಸುಮಾರು 12.30 ರಿಂದ 1.00 ಗಂಟೆಯಾಗಿತ್ತು. ಅಪಘಾತವಾದ ಸ್ಥಳದ ಚೆಕ್ಕುಬಂದಿ ಹೇಳುತ್ತೇನೆ. ಸುತ್ತಲು ಕೃಷಿ ಜಮೀನುಗಳು ಮತ್ತು ಕಾಲುವೆ ಇದೆ. ಸಾಕ್ಷಿ ಸ್ವತಃ ಜೆಗಳಿನ ಬಳಿ ಅಪಘಾತವಾಯಿತು ಎಂದು ಹೇಳುತ್ತಾರೆ. ಜೆಗಳಿನಿಂದ ಒಂದು ಅಡಿ ಪಕ್ಕ ಅಪಘಾತವಾಯಿತು. ಜೆಗಳನ್ನು ದಾಟುವಾಗ ಬಿದ್ದು ನೀವು ಗಾಯ ಮಾಡಿಕೊಂಡಿರುತ್ತೀರಾ ಎಂದರೆ ಸರಿಯಲ್ಲ. ಸಾಕ್ಷಿ ವಾಹನ ಬಂದು ಗುದ್ದ ಕಾರಣ ಬಿದ್ದೆ ಎಂದು ಹೇಳಿರುತ್ತಾರೆ. ಸಂತೋಷ ಎಂಬುವವರು ನಿಮ್ಮ ಊರಿನವರು ಎಂದರೆ ಸರಿ. ಸಂತೋಷ್ ನಿಧಾನವಾಗಿ ವಾಹನದಲ್ಲಿ ಬರುತ್ತಿದ್ದರು ಎಂದರೆ ಸರಿ. ಸಾಕ್ಷಿ ಸ್ವತಃ ಸೀಮೆಕಡ್ಡಿ ಉದ್ದ ಇದುದ್ದರಿಂದ ನನಗೆ ತಾಗಿ ಡಿಕ್ಕಿ ಪಡಿಸಿದರು ಎಂದು ಹೇಳುತ್ತಾರೆ.

2. ಅಪಘಾತ ಪಡಿಸಿದ ವಾಹನದ ಸಂಖ್ಯೆಯನ್ನು ಈಗ ನನಗೆ ಹೇಳಲಾಗುವುದಿಲ್ಲ. ಸ್ಕೂಟರಿನ ಬಣ್ಣ ಯಾವುದು ಎಂದರೆ ಸಾಕ್ಷಿ ಕಪ್ಪು ತರಹ ಇತ್ತು ಎಂದು ಹೇಳುತ್ತಾರೆ. ನಾನು ಎಡಭಾಗದ ಕಡೆಯಿಂದ ಹೋಗುತ್ತಿದ್ದೆ, ಬೈಕಿನ ಸವಾರ ಹಿಂಭಾಗದಿಂದ ಬಂದು ನನ್ನ

ಎಡಕ್ಕೈ ಭಾಗಕ್ಕೆ ಬಂದ ಡಿಕ್ಕಿ ಪಡಿಸಿದರು. ಅಪಘಾತವಾದ ಸ್ಥಳ ಮಣ್ಣಿನ ರಸ್ತೆ ಎಂದರೆ ಸರಿ. ಆ ರಸ್ತೆ ಕುರಹಟ್ಟಿ ಮತ್ತು ನುಗ್ಗಹಳ್ಳಿಗೆ ಹೋಗುತ್ತದೆ ಎಂದರೆ ಸರಿ. ನೀವು ಕಾಲುದಾರಿಯಲ್ಲಿ ಗದ್ದೆಗೆ ಹೋಗುತ್ತಿರುತ್ತೀರಾ ಎಂದರೆ ಸರಿ. 7-8 ದಿನ ತಡವಾಗಿ ದೂರು ನೀಡಿರುತ್ತೀರಾ ಎಂದರೆ ಸರಿ. ದಿಃ 24.09.2024 ರಂದು ನೀವು ಆಸ್ಪತ್ರೆಯಿಂದ ಬಿಡುಗಡೆಯಾಗಿರುತ್ತೀರಾ ಎಂದರೆ ಸರಿ. ಆಸ್ಪತ್ರೆಯಿಂದ ಬಿಡುಗಡೆಯಾಗಿ ಬಂದ ನಂತರ 7-8 ಬಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ಚಿಕಿತ್ಸೆ ಪಡೆದುಕೊಂಡಿರುವುದಕ್ಕೆ ಸಂಬಂಧಿಸಿದ ವೈದ್ಯಕೀಯ ರಶೀದಿಯನ್ನು ಹಾಜರು ಪಡಿಸಿದ್ದೇನೆ.

3. ಎಡಕೈಗೆ ಶಸ್ತ್ರ ಚಿಕಿತ್ಸೆ ಮಾಡಿರುತ್ತಾರೆ. ಈಗಲು ನೀವು ಮೊದಲಿನಂತೆಯೇ ಮನೆ ಕೆಲಸ ಹಾಗೂ ಕೃಷಿ ಕೆಲಸಗಳನ್ನು ಮಾಡುತ್ತಿರುತ್ತೀರಾ ಎಂದರೆ ಸರಿಯಲ್ಲ. ನಿಮ್ಮನ್ನು ನಿಮ್ಮ ಮನೆಯವರೇ ಆಸ್ಪತ್ರೆಯಲ್ಲಿ ಇದ್ದಾಗ ನೋಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ನನಗೆ ಸಣ್ಣ ಮಕ್ಕಳು ಅಕ್ಕಪಕ್ಕದ ಮನೆಯವರು ಸಹಾಯ ಮಾಡಿದರು ಎಂದು ಹೇಳುತ್ತಾರೆ. ವ್ಯವಸಾಯ ಮತ್ತು ಹೈನುಗಾರಿಕೆಯಿಂದ ತಿಂಗಳಿಗೆ ರೂ.25 ಸಾವಿರ ಆದಾಯ ಇತ್ತು ಎನ್ನುವ ಬಗ್ಗೆ ನೀವು ದಾಖಲೆ ನೀಡಿಲ್ಲ ಎಂದರೆ ಸರಿ. ಜಿಗಳನ್ನು ದಾಟುವಾಗ ಮಾಡಿಕೊಂಡ ಗಾಯವನ್ನು ದುರುಪಯೋಗ ಪಡಿಸಿಕೊಂಡು ಈ ಸುಳ್ಳು ದೂರು ದಾಖಲಿಸಿರುತ್ತೀರಾ ಎಂದರೆ ಸರಿಯಲ್ಲ. ನೀವು ಪರಿಹಾರ ಕೊಳ್ಳಲು ಅರ್ಹರಲ್ಲ

*ಎಂದರೆ ಸರಿಯಲ್ಲ. ನೀವು ಪೊಲೀಸರನ್ನು ಶಾಮೀಲು ಮಾಡಿಕೊಂಡು ಈ ಪ್ರಕರಣ ದಾಖಲು ಮಾಡಿರುತ್ತೀರಾ ಎಂದರೆ ಸರಿಯಲ್ಲ. ಕೆನ್ನಾಲು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡೆನು. ಚಿಕಿತ್ಸೆ ಕೊಟ್ಟ ವೈದ್ಯರ ಹೆಸರನ್ನು ಈಗ ಹೇಳಲು ನನಗೆ ಜ್ಞಾಪಕ ಇಲ್ಲ. ಪರಿಹಾರ ಪಡೆದುಕೊಳ್ಳಲು ವೈದ್ಯಕೀಯ ದಾಖಲಾತಿಗಳನ್ನು ಸೃಷ್ಟಿಸಿ ನೀಡಿರುತ್ತೀರಾ ಎಂದರೆ ಸರಿಯಲ್ಲ. ನೀವು ಸುಳ್ಳು ಸಾಕ್ಷಿ ಕೊಡುತ್ತಿದ್ದೀರಾ ಎಂದರೆ ಸರಿಯಲ್ಲ.*

***ಮರು ವಿಚಾರಣೆ ಇಲ್ಲ.***

***ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗೊಳಿಸಲಾಯಿತು.***

***ಓ ಹೇ ಕೇ ಸ ಇ ಒ***

***ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು***
***ಮತ್ತು ಜೆ.ಎಂ.ಎಫ್.ಸಿ., ಪಾಂಡವಪುರ.***